ಅವರ ಕೈಗೆ ಮುಟ್ಟಿಸಲು ತನ್ನೆದುರು ಕೂತಿದ್ದ ಸದಸ್ಯನಿಗೆ ಕೊಟ್ಟ. ಅದು ಹಲವು ಕೈಗಳನ್ನು ದಾಟಿ ಅಧ್ಯಕ್ಷರಿಗೆ ಮುಟ್ಟಿತು. ಅವರು ಅದನ್ನು ದೊಡ್ಡ ಸ್ವರದಲ್ಲಿ ಓದಿ ಹೇಳಿದರು. ಕ್ಷಣಕಾಲ ಅಲ್ಲಿ ಮೌನ. ಒಬ್ಬ ಸದಸ್ಯರು ಮೆತ್ತಗೆ, 'ಮರದ ಗೆಲ್ಲು ಮುರಿದು ಬೀಳುತ್ತದೆ ಎಂಬ ಭಯವಿದ್ದರೆ ಮನೆಯನ್ನೇ ಅಲ್ಲಿಂದ ಬೇರೆ ಕಡೆಗೆ ವರ್ಗಾಯಿಸಬಹುದಲ್ಲ' ಎಂದರು. ಅವರು ಮೆತ್ತಗೆ ಹೇಳಿದರೂ ಅದು ಮೂಸಬ್ಬನ ಕಿವಿಗೆ ಬಿತ್ತು. ಅವನು, 'ಅದು ಹೇಗಾಗುತ್ತದೆ ಮಾರಾಯ್ರೇ?' ಎಂದು ಅಪಸ್ವರವೆತ್ತಿದ. 'ನೀನು ಪಂಚಾಯತಿ ಒಪ್ಪಿಗೆ ಪಡೆಯದೆ ಮನೆ ಕಟ್ಟಿದ್ದೀಯಲ್ಲ?' ಎಂದವರು ಕ್ಯಾತೆ ತೆಗೆದರು. ಮುಂದಿನ ಬಾರಿ ಎಂಎಲ್ಎ ಸೀಟಿಗೆ ಪ್ರಯತ್ನಿಸುತ್ತಿದ್ದ ಅಧ್ಯಕ್ಷರು, 'ಅದನ್ನು ಈಗ ಕೆದಕುವುದು ಬೇಡ' ಎಂದು ಹೇಳಿ ಮೂಸಬ್ಬನ ಅರ್ಜಿಯನ್ನು ಕಾರ್ಯದರ್ಶಿಗಳ ಕೈಗೆ ರೆಕಾರ್ಡ್ ಮಾಡಲು ಕೊಟ್ಟರು. ಮೂಸಬ್ಬ 'ಬೇಗ ಕಡಿಸಿದರೆ ಆಗಬಹುದು' ಎಂದು ರಾಗವೆಳೆದ.

'ಒಂದು ಸಲ ಸ್ಪಾಟ್ ಇನ್ಸ್‌ಪೆಕ್ಷನ್ ಮಾಡಬೇಡವೇ ಸಾಹೇಬ್ರೇ? ಇಲ್ಲಿ ಕೂತಲ್ಲಿ ಒಪ್ಪಿಗೆ ಕೊಡಲಾಗುತ್ತದೆಯೇ?' ಎಂದು ಅದೇ ಸುಳಿನಗೆಯೊಂದಿಗೆ ಹೇಳಿದರು ಅಧ್ಯಕ್ಷರು. 'ಇಲ್ಲಿಯ ತನಕ ನೋಡಿಲ್ಲವೇ?' ಎಂದು ಮೂಸಬ್ಬ ಮತ್ತೆ ಕೇಳಿದ. ಮರ ಮುಖ್ಯ ರಸ್ತೆಯಲ್ಲಿದ್ದುದರಿಂದ ಎಲ್ಲರೂ ನೋಡಿದ್ದೇನೋ ನಿಜ. ಆದರೆ ಅರ್ಜಿಯ ವಿಲೇವಾರಿ ಆಗಬೇಕಿದ್ದರೆ ಅಧಿಕೃತವಾಗಿ ಸ್ಪಾಟ್ ಇನ್ಸ್‌ಪೆಕ್ಷನ್ ಆಗಬೇಕಲ್ಲ?

ಆದುದರಿಂದ ಮುಂದಿನ ವಾರದಲ್ಲಿ ಪಂಚಾಯತ್ ಅಧ್ಯಕ್ಷರು, ಕಾರ್ಯದರ್ಶಿ, ಮಣೆಗಾರರು, ಇತರ ಕೆಲವು ಸದಸ್ಯರ ಜೊತೆ ಬಂದು ಮರ ನೋಡಿದರು. ಮರ ಮುದಿಯಾದುದು ನಿಜ ಎಂದು ಅವರಿಗೂ ಮನದಟ್ಟಾಯಿತು. ಯಾವ ಕ್ಷಣಕ್ಕೂ ಉರುಳಿ ಮನೆಯ ಮೇಲೆ ಬೀಳಬಹುದೆಂದು ಅವರೆಲ್ಲರೂ ಒಪ್ಪಿದರು. ತನ್ನ ಅಂಗಡಿಯಿಂದಲೇ ಪೇಪರ್ ಗ್ಲಾಸಿನಲ್ಲಿ ಚಾ ಕೊಟ್ಟು 'ಬೇಗ ಆರ್ಡರು ಮಾಡಬೇಕೆಂದು ಅರಿಕೆ' ಎಂದು ಮೂಸಬ್ಬ ಕೈಕಟ್ಟಿ ನಿಂತ. 'ಮುಂದಿನ ಸಭೆಯಲ್ಲಿ ಇಡೋಣ' ಎಂದವರು ಹೇಳಿದಾಗ ಎಲ್ಲರೂ ಒಪ್ಪಿದರು.

ಮುಂದಿನ ಸಭೆಗೆ ಹೆಚ್ಚು ಕಾಯಬೇಕಿಲ್ಲದಿದ್ದರೂ ಹದಿನೈದು ದಿನಗಳು ದಾಟಿಯೇ ದಾಟಿದುವು. ಅವುಗಳ ನಡುವೆ ಕೆಲವು ದಿನರಾತ್ರಿಗಳಾದರೂ ದಾಟಿ ಹೋಗುತ್ತವಲ್ಲ? ಎರಡನೆಯ ಸಭೆಯಂದು ಒಬ್ಬ ಸದಸ್ಯ ಕ್ಯಾತೆ ತೆಗೆದ. ಅದನ್ನು ಅಧ್ಯಕ್ಷರೇ ಅವನ ಮುಖೇನ ಹೇಳಿಸಿದರೆಂದು ಮೂಸಬ್ಬನಿಗೆ ಅನುಮಾನ. 'ಮರ ಕಡಿಯುವುದೆಂದರೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರ ಅಧಿಕಾರವ್ಯಾಪ್ತಿಗೆ ಶಾಮೀಲಾದ ವಿಚಾರ. ಅದಕ್ಕೆ ಪಂಚಾಯತಿಯಿಂದ ಅರ್ಜಿ ಹಾಕುವ ಹಾಗಿಲ್ಲ. ಒಂದು ಸಮಿತಿ ಮಾಡಿ ಆ ಮೂಲಕ ಅರ್ಜಿ ಸಲ್ಲಿಸಬೇಕು. ಹೆಚ್ಚೆಂದರೆ ಆ ಅರ್ಜಿಗೆ ಪಂಚಾಯತಿನವರು ಶಿಫಾರಸು ಮಾಡಬಹುದು.' ಎಂದರು.

ಸರಿ. ಮೊದಲು ಮೂರು ಸದಸ್ಯರ ಒಂದು ಸಮಿತಿಯ ರಚನೆಯಾಯಿತು. ಅಧ್ಯಕ್ಷ? ಪಂಚಾಯತ್ ಅಧ್ಯಕ್ಷರು, 'ಸಮಿತಿಗೊಬ್ಬ ಅಧ್ಯಕ್ಷನನ್ನು ನೇಮಕ ಮಾಡಬೇಕು. ನಾನು ಮೂಸಬ್ಬನವರ ಹೆಸರನ್ನೇ ಸೂಚಿಸುತ್ತೇನೆ' ಎಂದು ಪ್ರಕಟಿಸಿದರು. ಮೂಸಬ್ಬ ಮಾತನಾಡುವ ಮೊದಲೇ ಇನ್ನೊಬ್ಬ ಸದಸ್ಯರು ದೊಡ್ಡ ಸ್ವರದಲ್ಲಿ, 'ನಾನು ಅದನ್ನು ಅನುಮೋದಿಸುತ್ತೇನೆ' ಎಂದರು. ಮೂಸಬ್ಬ ಗಾಬರಿಗೊಂಡು 'ನಾನೇ?' ಎಂದು ಆಕ್ಷೇಪ ತೆಗೆದ. 'ಮರ ಕಡಿಯಬೇಕೆಂದು ಅರ್ಜಿ ಕೊಟ್ಟವನು ನೀನು. ಅದರ ಅಗತ್ಯ ಇರುವುದು ನಿನಗೆ. ಬೇರೆ ಯಾರಿಗೂ ಅದರ ಅಗತ್ಯವಿಲ್ಲ. ಹಾಗಾಗಿ ನೀನೇ ಸಮಿತಿಯ ಅಧ್ಯಕ್ಷನಾಗುವುದು ನ್ಯಾಯ'